[Govt. of Karnataka C.R.P. 67]

| Deposition Sheets (RP.No.57) Form No.4 (Civil) | IN THE COURT OF CIVIL JUDGE & J.M.F.C., KARKALA. Criminal Case No. 2118/2023 |
|---|---|

.................................................Vs....................................

ಪಿ.ಡಬ್ಲ್ಯು : 8 ಸಿ.ಡಬ್ಲ್ಯು : 21

ಸಾಕ್ಷಿದಾರನ ಹೆಸರು : ಸುಭಾಷ್ ಚಂದ್ರ
ತಂದೆಯ ಹೆಸರು : ಪ್ರಭಾಕರ್ ಕಾಮತ್
ಪ್ರಾಯ : 54 ವರ್ಷ
ಉದ್ಯೋಗ : ಎ ಎಸ್ ಐ
ವಾಸ : ಧರ್ಮಸ್ಥಳ

ದಿನಾಂಕ 26.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ನಾನು 2021 ಜುಲೈ ರಿಂದ 2024 ಜುಲೈಯವರೆಗೆ ಕಾರ್ಕಳ ಗ್ರಾಮಾಂತರ ಪೋಲಿಸ್ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ಕಾರ್ಕಳ ಗ್ರಾಮಾಂತರ ಪೊಲೀಸ್ ಠಾಣಾ ಅಕ್ರ ನಂ. 105/23 ಕಲಂ 279, 337, 304 ಎ ಐ ಪಿ ಸಿ ರಡಿ ಚಾಸಾ-23 ರವರ ಸೂಚನೆಯಂತೆ ತಕ್ಷೀರು ಸ್ಥಳದ ಮಹಜರು ಮಾಡಿರುತ್ತೇನೆ. ದಿಃ08.08.2023 ರಂದು ಬೆಳಿಗ್ಗೆ 9.30 ಗಂಟೆಯಿಂದ 10.30 ಗಂಟೆಯವರೆಗೆ ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ-2 ರವರು ತೋರಿಸಿಕೊಟ್ಟಂತೆ ಪಂಚರಾದ ಚಾಸಾ-4 ಮತ್ತು 5 ರವರ ಸಮಕ್ಷಮ ತಕ್ಷೀರು ಸ್ಥಳದ ಮಹಜರನ್ನು ತಯಾರಿಸಿರುತ್ತೇನೆ. ಘಟನಾ ಸ್ಥಳದಲ್ಲಿ ಅಪಘಾತಕ್ಕೆ ಒಳಪಟ್ಟ ವ್ಯಾಗನರ್ ಕಾರು ಕೆಎ -20 ಝಡ್ 4597 ಮತ್ತು ಕೆಎ-20-ಇಎಫ್ -7367 ಹೊಂಡಾ ಆ್ಯಕ್ಟಿವಾ ಸ್ಕೂಟರ್ ಮತ್ತು ಸ್ಕೂಟರ್ ಸವಾರ ಧರಿಸಿದ್ದ ಸ್ಥಳದಲ್ಲಿ ಇದ್ದ ಕಪ್ಪು ಬಣ್ಣದ ಹೆಲ್ಮೆಟ್ ಸ್ವಾಧೀನಪಡಿಸಿಕೊಂಡಿರುತ್ತೇನೆ. ಕಾರಿನ ಮುಂಭಾಗದ ಮಡ್ ಗಾರ್ಡ್ ಬಾನೆಟ್ , ಗ್ಲಾಸ್

ಜಖಂಗೊಂಡಿರುತ್ತದೆ . ಸ್ಕೂಟರ್ ಮುಂಭಾಗದ ಡೂಮ್ ಜಖಂಗೊಂಡಿತ್ತು ಹಾಗೂ 2 ಮಿರರ್ ಬೆಂಡ್ ಆಗಿತ್ತು. ಸ್ಥಳದಲ್ಲಿ ಮಹಜರು ತಯಾರಿಸಿ ನಕ್ಷೆಯನ್ನು ತಯಾಸಿರುತ್ತೇನೆ ಮತ್ತು ಭಾವಚಿತ್ರವನ್ನು ತೆಗೆಸಿರುತ್ತೇನೆ. ಘಟನಾ ಸ್ಥಳದಲ್ಲಿ ಹಾಜರಿದ್ದ ಚಾಸಾ-2 ಮತ್ತು 3 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

3. ಈಗ ನಾನು ನೋಡಿದ ನಿಪಿ-8 ಸ್ಥಳ ಮಹಜರಿನಲ್ಲಿ ನನ್ನ ಸಹಿ ಇದೆ. ಸಾಕ್ಷಿಯ ಸಹಿಯನ್ನು ನಿಪಿ-8(ಡಿ) ಎಂದು ಗುರುತಿಸಲಾಯಿತು. ಈಗ ನಾನು ನೋಡಿದ ನಿಪಿ-9 ತಕ್ಷೀರು ಸ್ಥಳದ ನಕಾಶೆಯಲ್ಲಿ ನನ್ನ ಸಹಿ ಇದೆ. ಸಾಕ್ಷಿಯ ಸಹಿಯನ್ನು ನಿಪಿ-9(ಡಿ) ಎಂದು ಗುರುತಿಸಲಾಯಿತು. ನಿಪಿ-4 ರಿಂದ 7 ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದೇನೆ.

<u>ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಎಸ್ ಕೆ ಎಸ್ ವಕೀಲರಿಂದಃ</u>

4. ಚಾಸಾ-2 ಮತ್ತು 3 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ, ಅವರು ಕೊಟ್ಟ ಹೇಳಿಕೆಯಲ್ಲಿ ಕಾರಿನ ಚಾಲಕನ ಹೆಸರು ಶ್ರೀಮತಿ ರೇಖಾ ಶೆಟ್ಟಿ ಇದೆ ಎಂದರೆ ಅದು ಬೆರಳಚ್ಚು ತಪ್ಪಿನಿಂದ ರಮ್ಯ ಶೆಟ್ಟಿ ಆಗುವ ಬದಲು ರೇಖಾ ಶೆಟ್ಟಿ ಆಗಿದೆ. ಸದ್ರಿ ತಪ್ಪಾದ ಕಾರಣ ನಾನು ಚಾಸಾ-2 ಮತ್ತು 3 ರವರ ಮರುಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ಚಾಸಾ-2 ರವರು ಕಾರಿನ ಬಣ್ಣ ಗ್ರೆ ಎಂದು ಅವರ ಹೇಳಿಕೆಯಲ್ಲಿ ಹೇಳಿರುತ್ತಾರೆ ಮತ್ತು ನಿಪಿ-8 ರಲ್ಲಿ ಸಹ ಕಾರಿನ ಬಣ್ಣ ಗ್ರೆ ಎಂದು ಇದೆ ಎಂದರೆ ಸರಿ. ಕಾರಿನವರನ್ನು ವಿಚಾರಣೆ ಮಾಡಿರುವುದಿಲ್ಲ. ಮೃತ ಮಂಜುನಾಥ ಶೆಟ್ಟಿಯವರು ಕಾರ್ಕಳದಿಂದ ಬೆಳ್ಮಣ್ ಕಡೆಗೆ ಹೋಗುತ್ತಿದ್ದರು. ಮೃತ ಮಂಜುನಾಥ ಶೆಟ್ಟಿಯವರು ಮೆಸ್ಕಾಂ ಕಚೇರಿಗೆ ಹೋಗುತ್ತಿದ್ದರು ಎಂದರೆ ನಾನು ಭಾಗಶಃ ತನಿಖೆ ಮಾಡಿರುತ್ತೇನೆ, ಹಾಗಾಗಿ ನನಗೆ ಗೊತ್ತಿಲ್ಲ. ಮೃತ ಮಂಜುನಾಥ ಶೆಟ್ಟಿಯವರು ಮೆಸ್ಕಾಂ ಕಚೇರಿಗೆ ಹೋಗುತ್ತಿದ್ದವರು ಮುಂದಕ್ಕೆ ಹೋಗಿ ನಂತರ ಒಮ್ಮೆಲೆ ಬಲಭಾಗಕ್ಕೆ ತಿರುಗಿರುತ್ತಾರೆ, ಆದ ಕಾರಣ ಸದ್ರಿ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಬ್ರೇಕ್ ಮಾರ್ಕ್ ಇತ್ತು. ಘಟನಾ ಸ್ಥಳದಲ್ಲಿ ವಾಹನಗಳ ಬಿಡಿ ಭಾಗಗಳು ಬಿದ್ದಿರಲಿಲ್ಲ, ಯಾವುದೇ ರಕ್ತ ಬಿದ್ದಿರಲಿಲ್ಲ. ವಾಹನದ ನಂಬರ್ ಪ್ಲೇಟ್ ಜಖಂಗೊಂಡಿತ್ತು.

5. ಚಾಸಾ-2 ಮತ್ತು 3 ರವರು ಯಾವ ಭಾಗದಲ್ಲಿ ನಿಂತು ಘಟನೆಯನ್ನು ನೋಡಿರುತ್ತಾರೆ ಎಂದರೆ ಮೆಸ್ಕಾಂ ಕಟ್ಟಡದ ಬದಿಯಲ್ಲಿ ನಿಂತು ನೋಡಿರುತ್ತಾರೆ. ಚಾಸಾ-2 ಮತ್ತು 3 ರವರಿಗೆ ತಕ್ಷೀರು ಸ್ಥಳದಲ್ಲಿ ನೋಟಿಸು ನೀಡಿರುತ್ತೇನೆ. ತಕ್ಷೀರು ಸ್ಥಳದ ಸುತ್ತ ಮುತ್ತ

ಹಲವಾರು ಅಂಗಡಿ , ಮನೆಗಳು ಇವೆ. ಅಪಘಾತಕ್ಕೊಳಪಟ್ಟ ವಾಹನಗಳನ್ನು ಯಾವ ವಾಹನದಲ್ಲಿ ಸಾಗಿಸಲಾಗಿದೆ ಎಂದು ನನಗೆ ಗೊತ್ತಿಲ್ಲ. ಚಾಸಾ-2 ಮತ್ತು 3 ರವರ ಮೊಬೈಲ್ ನ ಸಿಡಿಆರ್ ನ್ನು ಪಡೆದುಕೊಂಡಿರುವುದಿಲ್ಲ. ನಾನು ಗಾಜ್ರಿಯಾ ಆಸ್ಪತ್ರೆಗೆ ಹೋಗಿರುವುದಿಲ್ಲ. ಪ್ರಥಮ ವರ್ತಮಾನ ವರದಿಯನ್ನು ನೋಡಿರುತ್ತೇನೆ. ನಾನು ಸ್ಥಳ ತನಿಖೆ ಮಾಡಿರುವುದಿಲ್ಲ, ಪ್ರಥಮ ವರ್ತಮಾನ ವರದಿಯನ್ನು ನೋಡಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸ್ಥಳಿಯ ಸಾಕ್ಷಿದಾರರನ್ನು ವಿಚಾರಿಸದೆ ಬೇರೆಯವರನ್ನು ವಿಚಾರಿಸಿ ಸುಳ್ಳು ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಹೆ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ